# ಶ್ರೀರಾಮಾನುಜರ ಜೀವನ ಮತ್ತು ಸಾಧನೆ – ೩

◆ ಸ್ವಾಮಿ ತಪಸ್ಯಾನಂದ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

**ಶ್ರೀಭಾಷ್ಯದ ರಚನೆ**

ರಾಮಾನುಜರು ತಾವು ಯಾಮುನಾಚಾರ್ಯರಿಗೆ ಕೊಟ್ಟ ಆಶ್ವಾಸನೆಗಳಲ್ಲಿ ಮೊದಲನೆಯದಾದ, 'ತಮಿಳು ವೇದದ ಪ್ರಸಾರ' ಮತ್ತು ವೈಷ್ಣವ ಸಂಪ್ರದಾಯಕ್ಕೆ ಬಹುಜನರ ಪರಿವರ್ತನೆ—ಈ ಕಾರ್ಯಗಳು ಬಹುಮಟ್ಟಿಗೆ ಕೈಗೂಡಿವೆಯೆಂದು ಭಾವಿಸಿದರು. ಅವರೀಗ ತಮ್ಮ ಎರಡನೆಯ ಆಶ್ವಾಸನೆಯನ್ನು ಪೂರೈಸಬೇಕಾಗಿತ್ತು. ಅದು ಬಾದರಾಯಣರ ವೇದಾಂತ ಸೂತ್ರಗಳಿಗೆ, ಸ್ವಮತೀಯವಾದ ಭಕ್ತಿತತ್ತ್ವಕ್ಕೆ ಅನುಗುಣವಾದ ಭಾಷ್ಯವೊಂದರ ರಚನೆ. ರಾಮಾನುಜರು ಈ ಕಠಿಣ ಕಾರ್ಯವನ್ನು ಕೈಗೊಳ್ಳಲು ಮುಂದಾದರು. ಅದಕ್ಕಾಗಿ ಅವರಿಗೆ 'ಬೋಧಾಯನ ವೃತ್ತಿ'ಯ ಅಧ್ಯಯನ ಆವಶ್ಯಕವಾಗಿತ್ತು. ಕಾರಣ, ಆ ವೃತ್ತಿಯು ಭಕ್ತಿಪಂಥದ ವೈಷ್ಣವ ಸಂಪ್ರದಾಯವು ಪ್ರತಿನಿಧಿಸುವ ತಾತ್ತ್ವಿಕ ಪರಂಪರೆಯ ಆಕರಗ್ರಂಥವಾಗಿತ್ತು. ಆದರೆ ಅವರಿಗೆ ದಕ್ಷಿಣ ಭಾರತದಲ್ಲೆಲ್ಲೂ ಆ ಕೃತಿಯ ಒಂದು ಪ್ರತಿಯೂ ದೊರಕಲಿಲ್ಲ. ಕಾಶ್ಮೀರದ ಶಾರದಾಪೀಠದಲ್ಲಿ ಅದು ದೊರಕಬಹುದೆಂದು ತಿಳಿಯಿತು. ಆದ್ದರಿಂದ ಅವರು ತಮ್ಮ ಶಿಷ್ಯ ಕೂರೇಶನೊಡನೆ ಆ ದೂರದ ಸ್ಥಳಕ್ಕೆ ಯಾತ್ರೆಯನ್ನು ಕೈಗೊಂಡರು. ಮೂರು ತಿಂಗಳ ಬಳಿಕ ಶಾರದಾಪೀಠವನ್ನು ತಲುಪಿದ ಅವರನ್ನು ಅಲ್ಲಿನ ಪಂಡಿತರೆಲ್ಲರೂ ಆದರದಿಂದ ಸ್ವಾಗತಿಸಿದರು. ಅವರ ವ್ಯಕ್ತಿತ್ವ ಮತ್ತು ವಿದ್ವತ್ತುಗಳಿಗೆ ಮಾರುಹೋದರು. ಆದರೆ ಅಲ್ಲಿನ ಗ್ರಂಥಾಲಯದಲ್ಲಿರುವ ಬೋಧಾಯನ ವೃತ್ತಿಯನ್ನು ಅವಲೋಕಿಸಲು ಅವಕಾಶ ಮಾಡಿಕೊಡಬೇಕೆಂಬ ರಾಮಾನುಜರ ಕೋರಿಕೆಗೆ, ಆ ಗ್ರಂಥದ ಪ್ರತಿಗೆ ಹುಳು ಹಿಡಿದು ನಷ್ಟವಾಗಿದೆಯೆಂದು ಜಾರಿಕೊಳ್ಳುವ ಉತ್ತರವನ್ನೇ ನೀಡಿದರು.

ಈ ಬಗೆಯ ಹಿಂದೇಟಿಗೆ ಕಾರಣ ಇಲ್ಲದಿರಲಿಲ್ಲ. ಆ ಗ್ರಂಥವನ್ನು ದ್ವೈತವಾದಿಯಾದ ವಿದ್ವಾಂಸರು ಅಧ್ಯಯನ ಮಾಡಿದರೆ, ಅದ್ವೈತ ಸಿದ್ಧಾಂತಕ್ಕೆ ಹಾನಿಯಾಗುವುದೆಂದೇ ಆ ಪಂಡಿತರ ಎಣಿಕೆ. ಇದರಿಂದ ಖಿನ್ನರಾದ ರಾಮಾನುಜರು ನಿರಾಶರಾಗಿ ನಿದ್ರಿಸುತ್ತಿರುವಾಗ, ಅಲ್ಲಿನ ಆರಾಧ್ಯದೇವತೆಯಾದ ದೇವಿ ಶಾರದೆಯೇ ಅವರ ಮುಂದೆ ಬಂದು ನಿಂತಳು. ಗ್ರಂಥವನ್ನು ಅವರ ಕೈಯಲ್ಲಿತ್ತು ಒಡನೆಯೇ ಅಲ್ಲಿಂದ ಹೊರಟುಹೋಗುವಂತೆ ಹೇಳಿದಳು. ಪುಸ್ತಕವು ಅಪಹರಿಸಲ್ಪಟ್ಟಿದೆಯೆಂದು ಪಂಡಿತರಿಗೆ ಅರಿವಾದಾಗ, ಅವರು ಆಚಾರ್ಯರನ್ನು ಬೆಂಬತ್ತಿಹೋಗಿ, ನಾಲ್ಕು ದಿನಗಳ ತರುವಾಯ, ಅವರನ್ನು ಸಂಧಿಸಿ ಬಲಾತ್ಕಾರದಿಂದ ಅದನ್ನು ಅವರಿಂದ ಕಸಿದುಕೊಂಡರು. ರಾಮಾನುಜರ ಶಿಷ್ಯನಾದ ಕೂರೇಶ, ತನ್ನ ಗುರುವನ್ನು ಸಂತೈಸಿ, ನಾಲ್ಕು ರಾತ್ರಿಗಳಲ್ಲಿ ವೃತ್ತಿಯನ್ನು ತಾನು ಅಧ್ಯಯನ ಮಾಡಿದ್ದಾಗಿಯೂ, ಅದರ ಮರುಪಠಣ ಪೂರ್ಣವಾಗಿ ಮಾಡಬಲ್ಲೆನೆಂದೂ ಬಿನ್ನವಿಸಿದನು. ಈಗ 'ಶ್ರೀಭಾಷ್ಯ' ಎಂದು ಪ್ರಸಿದ್ಧವಾಗಿರುವ ಭಾಷ್ಯವನ್ನು ರಚಿಸಲು ರಾಮಾನುಜರು ಆರಂಭಿಸಿದರು. ಕೂರೇಶನೇ ಅವರಿಗೆ ಲಿಪಿಕಾರ. ಆ ಭಾಷ್ಯವು ಬೋಧಾಯನರ ತತ್ತ್ವಗಳಿಗೆ ನಿಷ್ಠವಾಗಿದೆಯೇ ಇಲ್ಲವೇ ಎಂದು ಅವನೇ ಪರೀಕ್ಷಿಸಿದನು.

**ಭಾರತಾದ್ಯಂತ ತೀರ್ಥಯಾತ್ರೆ**

ಶ್ರೀಭಾಷ್ಯದ ರಚನೆಯು ಸಂಪೂರ್ಣವಾದ ಮೇಲೆ ಬಹಳ ಜನ ಶಿಷ್ಯರೊಡನೆ ಕೂಡಿಕೊಂಡು ರಾಮಾನುಜರು ಭಾರತದ ಉದ್ದಗಲಗಳಲ್ಲಿಯೂ ತೀರ್ಥಯಾತ್ರೆ ಮಾಡಲು ತೆರಳಿದರು. ಅದು ಅವರ ದಿಗ್ವಿಜಯವೂ ಆಗಿತ್ತು. ಇತರ ಮತಗಳ ವಿದ್ವಾಂಸರನ್ನು ಎದುರಿಸಿ, ವೈಷ್ಣವಮತವನ್ನು ಅವರಲ್ಲಿ ಹರಡುವ ಕಾರ್ಯವೂ ಇದರಿಂದ ಆಗುತ್ತಿತ್ತು. ಮೊದಲಿಗೆ ಅವರು ತಮಿಳು ಪ್ರಾಂತ್ಯದ ಮತ್ತು ಕೇರಳದ ಎಲ್ಲ ಪವಿತ್ರ ತೀರ್ಥಸ್ಥಾನಗಳನ್ನು ಸಂದರ್ಶಿಸಿ, ಅನಂತರ ಉತ್ತರ ಭಾರತದೆಡೆಗೆ ಸಾಗಿದರು. ದ್ವಾರಕಾ, ಮಥುರಾ, ಬೃಂದಾವನ, ಶಾಲಗ್ರಾಮ, ಸಾಕೇತ, ಬದರಿಕಾಶ್ರಮ, ನೈಮಿಷಾರಣ್ಯ ಮತ್ತು ಪುಷ್ಕರಗಳನ್ನು ಸಂದರ್ಶಿಸಿದ ಅವರು, ಕಾಶ್ಮೀರದ ಶಾರದಾಪೀಠವನ್ನು ತಲುಪಿದರು. ಶಾರದಾಪೀಠದ ವಿದ್ವಾಂಸರು ಇವರೊಡನೆ ತೀಕ್ಷ್ಣವಾದ ವಾದ-ವಿವಾದಗಳನ್ನು ನಡೆಸಿದರು. ಆದರೂ ರಾಮಾನುಜರು ಕಾಶ್ಮೀರದ ರಾಜನನ್ನು ತಮ್ಮ ಮತಕ್ಕೆ ಪರಿವರ್ತಿಸುವಲ್ಲಿ ಶಕ್ತರಾದರು. ಇಲ್ಲಿ ರಾಮಾನುಜರಿಗೆ ವಿಷ್ಣುವಿನ ಅವತಾರಗಳಲ್ಲಿ ಒಂದಾದ ಹಯಗ್ರೀವ ಸ್ವಾಮಿಯ ದರ್ಶನವಾಯಿತು. ನಂತರ ಅವರು ಕಾಶಿಗೆ ತೆರಳಿ, ಕೆಲವುಕಾಲ ಅಲ್ಲಿ ನೆಲೆಸಿ, ಅಲ್ಲಿನ ಹಲವಾರು ಪಂಡಿತರನ್ನು ತಮ್ಮ ಪಂಗಡಕ್ಕೆ ಸೇರಿಸಿಕೊಂಡರು. ತರುವಾಯ, ದಕ್ಷಿಣ ದಿಕ್ಕಿನೆಡೆಗೆ ಸಾಗಿದ ರಾಮಾನುಜರು ಈಗ ಪುರೀಕ್ಷೇತ್ರವೆಂದು ಪ್ರಸಿದ್ಧವಾಗಿರುವ ಶ್ರೀ ಪುರುಷೋತ್ತಮ ಕ್ಷೇತ್ರವನ್ನು ತಲುಪಿದರು. ಅಲ್ಲಿ ಎಂಬಾರ್ ಮಠ ಎನ್ನುವ ಮಠವನ್ನು ಸ್ಥಾಪಿಸಿದರು. ಅಲ್ಲಿನ ದೇವಾಲಯವನ್ನು ನೋಟ ಕೊಳ್ಳುತ್ತಿದ್ದ ವಿದ್ವಾಂಸರು, ಪರಾಜಯದ ಭೀತಿಯಿಂದ ರಾಮಾನುಜರನ್ನು ವಾದದಲ್ಲಿ ಎದುರಿಸಲು ನಿರಾಕರಿಸಿದರು. ಅನಂತರ, ರಾಮಾನುಜರು ಗರುಡ ಪರ್ವತದ ಶಿಖರ

ವಲ್ಲಿರುವ ಅಹೋಬಿಲ ಕ್ಷೇತ್ರವನ್ನು ತಲುಪಿ, ಅಲ್ಲೊಂದು ಮಠವನ್ನು ಸ್ಥಾಪಿಸಿದರು. ಈಶಲಿಂಗದ ನರಸಿಂಹಮೂರ್ತಿಯನ್ನು ಆರಾಧಿಸಿ, ಬಳಿಕ ತಿರುಪತಿಯ ವೆಂಕಟಾಚಲಪತಿಯ ಮಂದಿರವನ್ನು ತಲುಪಿದರು. ಅಲ್ಲಿ ಅವರು ತಮ್ಮ ಅತೀಂದ್ರಿಯ ಶಕ್ತಿಯ ಪ್ರಭಾವದಿಂದ ಆ ದೇಗುಲದ ವಿಗ್ರಹವು ವಿಷ್ಣುವಿನದೋ ಅಥವಾ ಶಿವನದೋ ಎಂಬ ವಿವಾದವನ್ನು ಬಗೆಹರಿಸಿ ಅದು ವಿಷ್ಣುವಿನದೇ ಎಂದು ಸಾಧಿಸಿ ತೋರಿಸಿದರು. ಅನಂತರ ಅವರು ತಮ್ಮ ಪೂರ್ವ ವಾಸಸ್ಥಾನವಾದ ಕಾಂಚೀಪುರಕ್ಕೆ ಬಂದು ವರದರಾಜಸ್ವಾಮಿಗೆ ಪ್ರಣಾಮಗಳನ್ನು ಸಲ್ಲಿಸಿ ಶ್ರೀರಂಗಕ್ಕೆ ಹಿಂತಿರುಗಿದರು.

ಈ ದಿಗ್ವಿಜಯದ ಅವಧಿಯಲ್ಲಿ ರಾಮಾನುಜರು ದೈವೇಚ್ಛೆಯಿಂದಲೋ ಏನೋ ಎರಡು ಬಾರಿ ಸೋಲನ್ನು ಕಾಣಬೇಕಾಯಿತು. ಅವರ ಯಾತ್ರೆಯ ಉದ್ದೇಶಗಳಲ್ಲಿ ಒಂದು, ಸಾಧ್ಯವಾದ ಮಟ್ಟಿಗೆ ಬಹುತೇಕ ಬೃಹತ್ ದೇವಾಲಯಗಳನ್ನು ಶ್ರೀವೈಷ್ಣವ ಪ್ರಭಾವಕ್ಕೆ ಒಳಪಡಿಸುವುದು. ತಿರುಪತಿಯಲ್ಲಿ ಅವರು ಈ ಕಾರ್ಯದಲ್ಲಿ ಯಶಸ್ವಿಯಾದರೂ, ತಿರುವನಂತಪುರದ ಅನಂತಪದ್ಮನಾಭಸ್ವಾಮಿಯ ದೇವಸ್ಥಾನ ಮತ್ತು ಪುರಿಯ ಜಗನ್ನಾಥ ಮಂದಿರಗಳಲ್ಲಿ ತಮ್ಮ ಈ ಪ್ರಯತ್ನದಲ್ಲಿ ವಿಫಲರಾದರು. ಎರಡೂ ಕಡೆಗಳಲ್ಲಿಯೂ ಸ್ಥಳೀಯ ಭಕ್ತರ ಉತ್ಕಟ ಪ್ರಾರ್ಥನೆಯ ಫಲವಾಗಿ ಭಗವಂತನೇ ರಾಮಾನುಜರನ್ನು ಅವರು ನಿದ್ರಿಸುತ್ತಿರುವಾಗ, ಹಲವು ಮೈಲುಗಳಷ್ಟು ದೂರ ಕೊಂಡೊಯ್ದು ಬಿಟ್ಟನು ಎಂದು ಹೇಳಲಾಗುತ್ತದೆ. ಮೇಲಿನ ಎರಡು ದೇವಸ್ಥಾನಗಳಲ್ಲಿಯೂ, ಧಾರ್ಮಿಕ ಚಿಹ್ನೆಗಳು ಮತ್ತು ಆಚರಣೆಗಳು ವೈಖಾನಸ ಆಗಮದ ಪ್ರಕಾರ ಇವೆ. ರಾಮಾನುಜರು ಶ್ರೀವೈಷ್ಣವರು ಅನುಸರಿಸುವ ಪಾಂಚರಾತ್ರ ಆಗಮಕ್ಕೆ ಅವುಗಳನ್ನು ಬದಲಾಯಿಸಬೇಕು ಎಂದು ಬಯಸಿದ್ದರು.

ರಾಮಾನುಜರು ಶ್ರೀರಂಗಕ್ಕೆ ಮರಳಿದ ನಂತರ, ಯಾಮುನರಿಗೆ ನೀಡಿದ್ದ ಮೂರನೆಯ ಆಶ್ವಾಸನೆಯನ್ನು ಪೂರೈಸುವಲ್ಲಿ ಸಫಲರಾದರು. ಅದೇನೆಂದರೆ, ವಿಷ್ಣು ಪುರಾಣದ ಕರ್ತೃಗಳಾದ ಪರಾಶರರಿಗೆ ಕೃತಜ್ಞತೆಯನ್ನು ಸಲ್ಲಿಸಲು, ಅವರ ಹೆಸರಿನ ಒಬ್ಬ ಶಿಷ್ಯನನ್ನು ಉತ್ತರಾಧಿಕಾರಿಯನ್ನಾಗಿ ಮಾಡಿಕೊಳ್ಳುವುದು. ಆ ಕಾರ್ಯ, ಕೂರೇಶನಿಗೆ ಅವಳಿ ಮಕ್ಕಳು ಜನಿಸಿದಾಗ ಕೈಗೂಡಿತು. ಕೂರೇಶ, ಮೊದಲು ಭಾರೀ ಶ್ರೀಮಂತನಾಗಿದ್ದವನು. ಅವನಿಗೆ ಕಾಂಚೀಪುರದ ಬಳಿ ಬಹು ದೊಡ್ಡ ಜಮೀನು ಕೂಡಾ ಇತ್ತು. ಆತ ಸ್ವಭಾವದಲ್ಲಿ ಬಹಳ ಧಾರ್ಮಿಕ ಮತ್ತು ಕೊಡುಗೈ ದಾನಿ. ಬೇಡುವವರಿಗೆ ಆಶ್ರಯ ನೀಡಲು ಅವನ ಮನೆಯ ಬಾಗಿಲು ಸದಾ ಕಾಲ ತೆರೆದಿರುತ್ತಿತ್ತು. ಆತನ ಪತ್ನಿ ಆಂಡಾಳ್, ಪತಿಗೆ ನಿಜವಾದ ಸಹಧರ್ಮಿಣಿ. ಅವರಿಬ್ಬರಿಗೂ ರಾಮಾನುಜರ ಮೇಲೆ ಅಪಾರ ಗೌರವ ಮತ್ತು ಶ್ರದ್ಧೆ. ಅವರಿಬ್ಬರೂ ರಾಮಾನುಜರನ್ನೇ ಎಲ್ಲ ವಿಧದಲ್ಲೂ ಅನುಸರಿಸುತ್ತಿದ್ದರು. ರಾಮಾನುಜರು ಶ್ರೀರಂಗಕ್ಕೆ ತೆರಳಿದ ಅನಂತರ, ಕೂರೇಶ ಸಾಂಸಾರಿಕ ಜೀವನದಲ್ಲಿ ಆಸಕ್ತಿಯನ್ನು ಕಳೆದುಕೊಂಡನು ತನ್ನ ಎಲ್ಲಾ ಸಂಪತ್ತನ್ನೂ ದಾನ ಮಾಡಿ, ಸಪತ್ನೀಕನಾಗಿ ಶ್ರೀರಂಗವನ್ನು ತಲುಪಿ ರಾಮಾನುಜರ ಸೇವೆಯಲ್ಲಿ ನಿರತನಾದನು. ಅಲ್ಲಿ ಬೈರಾಗಿಯಂತೆ ಭಿಕ್ಷೆ ಬೇಡಿಯೇ ಅವನ ಆಹಾರ ಸೇವನೆ. ಒಂದು ದಿನ ಭಾರೀ ಮಳೆ ಬಂದು ದಂಪತಿಗಳಿಗೆ ಹೊರಗೆ ಕಾಲಿಡಲಾಗಲೇ ಇಲ್ಲ. ಉಪವಾಸವಿದ್ದ ಆ ಸಮಯದಲ್ಲಿ ಆಂಡಾಳ್ ಭಿಕ್ಷೆಗಾಗಿ ಶ್ರೀರಂಗನಾಥಸ್ವಾಮಿಯನ್ನು ಪ್ರಾರ್ಥಿಸುತ್ತಾಳೆ. ಒಡನೆಯೇ, ರಂಗನಾಥನಿಗೆ ನಿವೇದಿಸಿದ ಪ್ರಸಾದದೊಂದಿಗೆ, ಸುಂದರ ಬಾಲಕನೊಬ್ಬ ಅವರ ಮನೆಗೆ ಬರುತ್ತಾನೆ. ಪ್ರಸಾದವನ್ನು ಸೇವಿಸಿದ ಆಂಡಾಳ್ ಗರ್ಭಿಣಿಯಾದಳು. ಸ್ಫುರದ್ರೂಪಿಗಳಾದ ಅವಳಿ ಮಕ್ಕಳಿಗೆ ಜನ್ಮವಿತ್ತಳು. ಆರು ತಿಂಗಳ ಬಳಿಕ, ರಾಮಾನುಜರು ಆ ಶಿಶುಗಳಿಗೆ 'ಪರಾಶರ' ಮತ್ತು 'ವ್ಯಾಸ' ಎಂದು ಹೆಸರಿಟ್ಟರು. ಮುಂದಿನ ದಿನಗಳಲ್ಲಿ, ಪರಾಶರನು ಮಹಾಭಕ್ತನಾಗಿಯೂ, ವಿದ್ವಾಂಸನಾಗಿಯೂ ಬೆಳೆದನು. ವೈಷ್ಣವರ ನಾಯಕತ್ವವನ್ನು ವಹಿಸಿ, ರಾಮಾನುಜರ ಉತ್ತರಾಧಿಕಾರಿಯಾದನು. ಹೀಗೆ ಅವರು ಯಾಮುನರಿಗೆ ನೀಡಿದ್ದ ಮೂರನೆಯ ಆಶ್ವಾಸನೆಯನ್ನು ಪೂರೈಸಿದರು.

**ಮೇಲುಕೋಟೆಗೆ ವಲಸೆ**

ಸಾವಧಾನವಾಗಿ ಹೀಗೆ ಸಾಗಿದ್ದ ರಾಮಾನುಜರ ಬಾಳುವೆಯ ಗತಿ ಚೋಳರಾಜ ಕುಲೋತ್ತುಂಗನ (ಕ್ರಿಮಿಕಂಟಕನೆಂದು ಇನ್ನೊಂದು ಹೆಸರು) ದೌರ್ಜನ್ಯದ ರಾಜನೀತಿಯ ಕಾರಣದಿಂದಾಗಿ ಪ್ರಕ್ಷುಬ್ಧವಾಗಿ ಹೋಯಿತು. ಆ ರಾಜ ಧರ್ಮಾಂಧ ಶೈವಭಕ್ತ. ಶೈವ ಮತವನ್ನು ತನ್ನ ರಾಜ್ಯದ ಏಕಮಾತ್ರ ಧರ್ಮವನ್ನಾಗಿಸುವುದು ಅವನ ಮಹತ್ವಾಕಾಂಕ್ಷೆ ಆಗಿತ್ತು. ತನ್ನ ಮತ್ತು ತನ್ನ ಸಲಹೆಗಾರರ ಯೋಜನೆಯ ಪ್ರಕಾರ, ಅವನು ಈ ದಿಸೆಯಲ್ಲಿ ಕೈಕೊಂಡ ಮೊದಲ ಹೆಜ್ಜೆಯೆಂದರೆ, ವೈಷ್ಣವ ನೇತಾರರನ್ನು 'ಶಿವನೊಬ್ಬನೇ ಆರಾಧ್ಯ ದೈವ' ಎಂದು ಘೋಷಿಸುವ ಒಪ್ಪಿಗೆಯ ಪತ್ರಕ್ಕೆ ಸಹಿ ಹಾಕುವಂತೆ ಮಾಡುವುದು. ಅದರಂತೆಯೇ, ರಾಮಾನುಜರನ್ನು ರಾಜಧಾನಿಗೆ ಬರುವಂತೆ ಆಜ್ಞೆ ಮಾಡಲಾಯಿತು. ಅವರನ್ನು ಅಪಾಯದಿಂದ ರಕ್ಷಿಸಲು, ಅವರ ಅತ್ಯಂತ ಪ್ರೀತಿಪಾತ್ರನೂ, ಅವರಲ್ಲಿ ಭಕ್ತಿಯುಳ್ಳವನೂ ಆದ ಶಿಷ್ಯ ಕೂರೇಶನು ರಾಮಾನುಜರಂತೆ ವೇಷ ಧರಿಸಿ, ಮತ್ತೊಬ್ಬ ಶಿಷ್ಯ 'ಪೆರಿಯ ನಂಬಿ' ಎನ್ನುವವನ ಜೊತೆಯಲ್ಲಿ ಚೋಳ ರಾಜಧಾನಿಗೆ ಹೋಗುತ್ತಾನೆ. ಅವರ ಈ ಉಪಾಯವು ಬಯಲಾಗಿ ಅವರಿಬ್ಬರ ಕಣ್ಣುಗಳನ್ನು ಕೀಳುವ ಘೋರ ಶಿಕ್ಷೆಯನ್ನು ವಿಧಿಸಲಾಯಿತು. ಪೆರಿಯನಂಬಿ ಸ್ಥಳದಲ್ಲಿಯೇ ಸಾವ

ನ್ನಪ್ಪಿದ. ಕೂರೇಶ ಮಧುರೆಯ ಹತ್ತಿರದ 'ತಿರುಮಾಲಿರುನ್ ಸೋಲೈ' ಎಂಬಲ್ಲಿನ ದೊಡ್ಡ ವೈಷ್ಣವ ದೇವಾಲಯದಲ್ಲಿ ಏಕಾಂತವಾಸಕ್ಕಾಗಿ ತೆರಳಿದ. ರಾಮಾನುಜರಾದರೋ, ಗುಡ್ಡ ಗಾಡಿನ ಪಶ್ಚಿಮ ಘಟ್ಟಗಳನ್ನು ಹಾದು, ಮೈಸೂರು (ಈಗಿನ ಕರ್ನಾಟಕ) ಪ್ರಾಂತವನ್ನು ತಲುಪಿದರು. ಆಗ ಆ ಪ್ರದೇಶ ವನ್ನು ಹೊಯ್ಸಳ ರಾಜವಂಶಕ್ಕೆ ಸೇರಿದ ಬಿಟ್ಟಿದೇವ ಎಂಬ ದೊರೆ ಆಳುತ್ತಿದ್ದ. ಅವನು ಹುಟ್ಟಿನಿಂದ ಜೈನ. ಅವನು ಜೈನ ವಿದ್ವಾಂಸರ ಸಮಾವೇಶವೊಂದನ್ನು ಕರೆದನು. ಅದರಲ್ಲಿ ಪಾಲ್ಗೊಂಡ ರಾಮಾನುಜರು ವಾಗ್ವಿವಾದದಲ್ಲಿ ಅವರನ್ನೆಲ್ಲ ಸೋಲಿಸಿದರು. ಇದರಿಂದಾಗಿ ಅವರು ಬಿಟ್ಟಿದೇವನನ್ನು ವೈಷ್ಣವ ಮತಕ್ಕೆ ಪರಿವರ್ತಿಸುವಲ್ಲಿ ಮತ್ತು ಆತನ ಹೆಸರನ್ನು ವಿಷ್ಣುವರ್ಧನ ಎಂದು ಮಾರ್ಪಡಿಸುವಲ್ಲಿ ಯಶಸ್ವಿಯಾದರು. ಅನೇಕ ಜೈನರೂ ವೈಷ್ಣವ ಮತಾವಲಂಬಿಗಳಾದರು. ರಾಜ ವಿಷ್ಣುವರ್ಧನನ ಪೋಷಣೆಯೊಂದಿಗೆ, ರಾಮಾನುಜರು ಇಂದು ಮೇಲುಕೋಟೆ ಎಂದು ಹೆಸರಾದ ಯಾದವಾದ್ರಿ ಯಲ್ಲಿ ದೊಡ್ಡ ದೇವಸ್ಥಾನವೊಂದನ್ನು ನಿರ್ಮಿಸಿದರು. ಇನ್ನಿತರ ಐದು ಸ್ಥಳಗಳಲ್ಲಿಯೂ, ಹೀಗೆಯೇ ದೇವಾಲಯ ಗಳನ್ನು ಕಟ್ಟಿಸಿದರು. ಅವರ ಅನೇಕ ಮುಖ್ಯ ಶಿಷ್ಯರು ಕೂಡ ಮೈಸೂರು ಪ್ರದೇಶಕ್ಕೆ ವಲಸೆ ಬಂದಿದ್ದರಿಂದ ಶ್ರೀವೈಷ್ಣವರ ಹಲವಾರು ವಸತಿ ಪ್ರದೇಶಗಳು ಆ ದೇವಮಂದಿರಗಳ ಸುತ್ತಲೂ ಹಬ್ಬಿಕೊಂಡವು. ಶ್ರೀವೈಷ್ಣವರು ಹಣೆಯ ಮೇಲೆ ಧಾರಣೆ ಮಾಡುವ 'ನಾಮ'ಕ್ಕೆ ಉಪಯೋಗಿಸುವ ವಿಶೇಷ ರೀತಿಯ ಬಿಳಿಯ ಮಣ್ಣು, ಮೇಲುಕೋಟೆಯಲ್ಲಿ ದೊರೆಯು ತ್ತಿತ್ತು. ಹಾಗೆಂದೇ ರಾಮಾನುಜರಿಗೆ ಈ ಸ್ಥಳದ ಮೇಲೆ ಪ್ರೀತಿ ಮತ್ತು ಆಕರ್ಷಣೆ ಉಂಟಾಯಿತು.

ಮೇಲುಕೋಟೆಯ ಈ ದೇಗುಲದ ಮೂಲ ವಿಗ್ರಹದ ಹೆಸರು 'ಯಾದವಾದ್ರಿ ಪತಿ' ಎಂದು. ಇದರ ಬಗ್ಗೆ ಆಸಕ್ತಿ ಕೆರಳಿಸುವ ಐತಿಹ್ಯವೊಂದಿದೆ. ಅಲ್ಲಿನ ಗ್ರಾಮಸ್ಥರು ಪುರಾತನ ನಂಬಿಕೆಯ ಪ್ರಕಾರ, ಬಹಳ ಹಿಂದೆ ಹಳೆಯದಾದ ದೇವ ಮಂದಿರವೊಂದು ಅಲ್ಲಿತ್ತೆಂದೂ, ಅದು ಮುಸ್ಲಿಂ ದಾಳಿ ಕೋರರ ಆಕ್ರಮಣಕ್ಕೆ ತುತ್ತಾಗಿದ್ದರಿಂದ ಆ ಮಂದಿರದ ವಿಗ್ರಹ ಮೂರ್ತಿಯನ್ನು ಪೂಜೆಗೈಯುತ್ತಿದ್ದ ಅರ್ಚಕರು ಅದನ್ನು ಇಲ್ಲೇ ಎಲ್ಲೋ ಹುದುಗಿಸಿಟ್ಟಿದ್ದಾರೆಂದೂ ರಾಮಾನುಜರಿಗೆ ತಿಳಿಸಿದರು. ರಾಮಾನುಜರು, ಹುತ್ತವೊಂದನ್ನು ಅಗೆಯಿಸಿ ಮೂರ್ತಿಯನ್ನು ಪಡೆದರು. ಒಂದಿನ ರಾತ್ರಿ ಆ ಮೂರ್ತಿಯ ವಿಚಾರವಾಗಿ ಸ್ವಪ್ನವೊಂದನ್ನು ಕಂಡಿದ್ದ ರಾಮಾನುಜರು ಅದರ ಪ್ರತಿಷ್ಠಾಪನೆಗೆ ವ್ಯವಸ್ಥೆ ಮಾಡಿದರು. ಕ್ರಮೇಣ, ಸುತ್ತಲೂ ದೊಡ್ಡ ದೇಗುಲವೊಂದು ನಿರ್ಮಾಣವಾಯಿತು. ಆ ದೇವಮೂರ್ತಿಗೆ ಇಷ್ಟರಿಂದಲೇ ತೃಪ್ತಿಯಾಗಲಿಲ್ಲವಂತೆ. ಆ ಮೂಲ ವಿಗ್ರಹಕ್ಕೆ ದೇಗುಲದ ಹೊರಗಡೆ ಮೆರವಣಿಗೆ ಯಲ್ಲಿ ಕರೆದುಕೊಂಡು ಹೋಗುವ ಉತ್ಸವಮೂರ್ತಿಯ ಕೊರತೆ. ಸಂಪತ್ಕುಮಾರ ಎಂಬ ಆ ಉತ್ಸವ ಮೂರ್ತಿಯು ದೆಹಲಿಯ ಮುಸ್ಲಿಂ ದೊರೆಯ ಮಗಳ ಬಳಿ ಇರುವು ದಾಗಿಯೂ, ಅದನ್ನು ಇಲ್ಲಿಗೆ ಕರೆತರಬೇಕೆಂದೂ ರಾಮಾನುಜ ರಿಗೆ ಭಗವಂತನ ಆಜ್ಞೆಯಾಯಿತು. ರಾಮಾನುಜರು ಇದಕ್ಕಾಗಿ ತಮ್ಮ ಒಬ್ಬ ಶಿಷ್ಯನೊಡನೆ ದೆಹಲಿಗೆ ತೆರಳಿದರು. ಮುಸ್ಲಿಂ ರಾಜನನ್ನು ಭೇಟಿಯಾಗಿ ತಮ್ಮ ಪಾಂಡಿತ್ಯ ಮತ್ತು ಪವಿತ್ರತೆಗಳಿಂದ ಅವನ ಮನಸ್ಸನ್ನು ಒಲಿಸಿಕೊಂಡರು. ಅವನಿಂದ ವಿಗ್ರಹವನ್ನು ಪಡೆದುಕೊಂಡು ದಕ್ಷಿಣ ದಿಕ್ಕಿನೆಡೆ ತ್ವರೆಯಿಂದ ಪ್ರಯಾಣ ಬೆಳೆಸಿದರು. ದೆಹಲಿಯ ಆ ಸುಲ್ತಾನನ ಮಗಳ ಹೆಸರು ಬೀಬಿ ನಾಚ್ಚಿಯಾರ್ ಎಂದು. ಅವಳು ಆ ಮೂರ್ತಿಯನ್ನೇ ತನ್ನ ಪ್ರಿಯತಮನೆಂದೆಣಿಸಿ ದ್ದಳು. ಅವಳು ಆ ಮೂರ್ತಿಯ ಹಿಂದೆಯೇ ಬಂದು ಶ್ರೀರಂಗವನ್ನು ತಲುಪಿದಳು. ರಾಮಾನುಜರಿಗೆ ಆಕೆ ಒಬ್ಬ ಮಹಾಭಕ್ತೆ ಎಂಬುದರ ಅರಿವಿತ್ತು. ಹಾಗೆಂದೇ, ಅವಳು ಮುಸ್ಲಿಂ ಕುಟುಂಬದಲ್ಲಿ ಜನಿಸಿದವಳಾದರೂ, ದೇವಸ್ಥಾನದ ಒಳಗೆ ಪ್ರವೇಶಿಸಲು ಅನುಮತಿಯಿತ್ತರು. ಅಂದಿನಿಂದ ಆಕೆ ಭಗವಂತನ ಸೇವೆಯಲ್ಲೇ ತನ್ನೆಲ್ಲ ಕಾಲವನ್ನೂ ವ್ಯಯಿಸಿದಳು. ಕಡೆಗೆ ಆಕೆಯ ಪುಣ್ಯ ಆಕೃತಿ ಶ್ರೀಸಂಪತ್ಕುಮಾರ ವಿಗ್ರಹ ಮೂರ್ತಿಯಲ್ಲಿ ಲೀನವಾಗಿ ಹೋಯಿತು ಎಂದು ಐತಿಹ್ಯ ವಿದೆ. ಆಕೆಯ ಅಪ್ರತಿಮ ಭಗವದ್ ಪ್ರೇಮದ ಸಂಕೇತವಾಗಿ, ಆಕೆಯ ವಿಗ್ರಹ ಇಂದಿಗೂ ದಕ್ಷಿಣ ಭಾರತದ ಅನೇಕ ದೇವಸ್ಥಾನಗಳಲ್ಲಿ ಪೂಜಿಸಲ್ಪಡುತ್ತಿದೆ.

ಈ ಮಧ್ಯೆ ಕ್ರೂರಿ ಕುಲೋತ್ತುಂಗನ ಅವಸಾನವಾಯಿತು. ನಂತರ ಉದಾರಿ ಮತ್ತು ಸಹನಶೀಲನಾದ ರಾಜನೊಬ್ಬ ಚೋಳ ಸಿಂಹಾಸನವನ್ನು ಏರಿದ. ರಾಮಾನುಜರು ಶ್ರೀರಂಗಕ್ಕೆ ತಿರುಗಿ ಬರಲು ಈ ಬೆಳವಣಿಗೆ ಅನುವು ಮಾಡಿಕೊಟ್ಟಿತು. ಅವರನ್ನು ಅಗಲುವ ಸಂದರ್ಭ ಬಂದಿತೆಂದು ಮೇಲು ಕೋಟೆಯ ಅವರ ಭಕ್ತರು ಶೋಕಾವಿಷ್ಟರಾದರು. ತಾವು ಪ್ರತಿಷ್ಠಾಪಿಸಿದ ಅವರ ಮೂರ್ತಿಯಲ್ಲಿ ತಮ್ಮ ಸಾನ್ನಿಧ್ಯವನ್ನು ದಯಪಾಲಿಸಬೇಕೆಂದು ಅವರು ರಾಮಾನುಜರನ್ನು ಪ್ರಾರ್ಥಿಸಿದರು. ಅವರ ಕೋರಿಕೆಯನ್ನು ಪೂರೈಸಿದ ಬಳಿಕ ಯತಿರಾಜರು ಯಾದವಗಿರಿಯಿಂದ ತೆರಳಿದರು. ಮಾರ್ಗದಲ್ಲಿ ಅನೇಕ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸುತ್ತ, ಶ್ರೀರಂಗದಲ್ಲಿದ್ದ ತಮ್ಮ ಮಠವನ್ನು ತಲುಪಿದರು. ಅವರು ದರ್ಶಿಸಿದ ಆ ಪುಣ್ಯಕ್ಷೇತ್ರಗಳಲ್ಲಿ ಎರಡು ಕ್ಷೇತ್ರಗಳು ಬಹು ಪವಿತ್ರವಾದವುಗಳು. ಒಂದು ಆಳ್ವಾರುಗಳಲ್ಲಿ ಒಬ್ಬಳೆಂದು ಪರಿಗಣಿಸಲ್ಪಟ್ಟ ಮಹಾ ಭಕ್ತೆ ಆಂಡಾಳ್ ಜನ್ಮಸ್ಥಾನವಾದ ಶ್ರೀವಿಲ್ಲಿಪುತ್ತೂರು. ಇನ್ನೊಂದು, ಆಳ್ವಾರುಗಳಲ್ಲಿ ಪ್ರಥಮರಾದ ನಮ್ಮಾಳ್ವಾರ್‌ರ ಜನ್ಮಸ್ಥಳವಾದ ಆಳ್ವಾರ್-ತಿರುನಗರು.

(ಮುಂದುವರೆಯುವುದು)